# ಆಹಾ ಸುದ್ದಿ!

★ ಸಸಿತೋಟ

ಜಪಾನಿಗೆ ಭೇಟಿ ಕೊಟ್ಟ ಚೀನಾದ ದಂಪತಿ ತಾವು ತಂಗಿದ್ದ ಹೋಟೆಲ್ ಕೊಠಡಿಯ ಶೌಚಾಲಯದ ಸೀಟ್ ಅನ್ನೇ ಜೊತೆಗೆ ತೆಗೆದುಕೊಂಡು ಹೋಗಿದ್ದರಂತೆ. ಹೋಟೆಲ್ ಸಿಬ್ಬಂದಿ ಪ್ರವಾಸಿ ಏಜೆನ್ಸಿಯನ್ನು ಸಂಪರ್ಕಿಸಿ ಅದನ್ನು ವಾಪಸ್ಸು ಪಡೆದಿದ್ದಾರಂತೆ. ಜಪಾನಿನಲ್ಲೂ ಬಯಲು ಶೌಚಾಲಯವಿರಬಹುದೇ ಎಂಬ ಸಂಶಯ ಚೀನಿ ದಂಪತಿಯ ತಲೆಯಲ್ಲಿ ಬಂದಿರಬಹುದು.



ಸ್ಕಾಟ್ಲೆಂಡ್‌ನ ವಿಶ್ವವಿದ್ಯಾನಿಲಯವೊಂದರಲ್ಲಿ ಹೊಸ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಪರಿಯಿದು. ಶೈಕ್ಷಣಿಕ ವರ್ಷದ ಆರಂಭದಲ್ಲಿ ಪರಸ್ಪರ ನೊರೆ ಎರಚಿ ಹೊಡೆದಾಡಿಕೊಳ್ಳುವರಂತೆ. ಇಡೀ ವರ್ಷದ ಅಜೆಂಡ ಮಂಡಿಸಿದ ಹಾಗಾಯಿತು.



ಮನಿಲಾ ಜೈಲಿನಲ್ಲಿ ಕೈದಿಗಳು ತುಂಬಿ ತುಳುಕುತ್ತಿದ್ದಾರಂತೆ. 400 ಕೈದಿಗಳ ಸಾಮರ್ಥ್ಯದ ಜೈಲಿನಲ್ಲಿ 8000ಕ್ಕೂ ಅಧಿಕ ಮಂದಿಯನ್ನು ತುರುಕಿದ್ದಾರಂತೆ. ಅಲ್ಲಿ ಮಾದಕ ದ್ರವ್ಯ ಕಳ್ಳಸಾಗಣೆದಾರರ ವಿರುದ್ಧ ಸರ್ಕಾರ ಯುದ್ಧ ಸಾರಿದ್ದು ಇದಕ್ಕೆ ಕಾರಣ ಎನ್ನಲಾಗಿದೆ. ಒಳಗಡೆ ಕೈದಿಗಳ ನಡುವೆ ಯುದ್ಧ ನಡೆದರೆ ಶಿಕ್ಷೆ ವಿಧಿಸುವ ಸರ್ಕಾರದ ಕೆಲಸ ಇನ್ನಷ್ಟು ಸುಗಮವಾಗಬಹುದು.



ಪ್ರೇಗ್‌ನಲ್ಲಿ ಕಟ್ಟಡವೊಂದರ ಮೇಲ್ಛಾವಣಿಯನ್ನು ಪಾರ್ಟಿ ನಡೆಸಲು ಬಾಡಿಗೆಗೆ ನೀಡಲಾಗಿದ್ದು, ಮೊದಲ ಪಾರ್ಟಿಯಲ್ಲಿ ಎರಡು ಆಡುಗಳನ್ನು ಗೌರವಾನ್ವಿತ ಅತಿಥಿಗಳನ್ನಾಗಿ ತನ್ನಿ ಎಂದು ಮನವಿ ಮಾಡಿಕೊಂಡಿದ್ದರಂತೆ ಕಟ್ಟಡದ ಮಾಲೀಕರು. ಮುಂದೆ ಇದನ್ನು ಮೇಲ್ಛಾವಣಿ ತೋಟವನ್ನಾಗಿ ಮಾಡಿ, ಟೊಮ್ಯಾಟೊ ಬೆಳೆಯುವ ಇರಾದೆ ಝೆಕ್‌ನ ಮಾಜಿ ಅಧ್ಯಕ್ಷರ ಮೊಮ್ಮಗನಾದ ಕಟ್ಟಡದ ಮಾಲೀಕನಿಗಿದೆಯಂತೆ. ಗೊಬ್ಬರವನ್ನು ಪಾರ್ಟಿಯ ಗೌರವಾನ್ವಿತ ಅತಿಥಿಗಳೇ ಬಿಟ್ಟು ಹೋಗುತ್ತಾರಲ್ಲ!




ಕೈಯಲ್ಲಿ ಪಿಸ್ತೂಲ್ ಹಿಡಿದು ಶತ್ರುಗಳನ್ನು ಮುಗಿಸುವ, ಬ್ಲಾಂಡ್ ಚೆಲುವೆಯರೊಡನೆ ರೋಮಾನ್ಸ್ ಮಾಡುವ ಜೇಮ್ಸ್ ಬಾಂಡ್ 007 ಪಾತ್ರಧಾರಿ ಐರಿಶ್ ನಟ ಪಿಯರ್ಸ್ ಬ್ರಾಸ್ನಾನ್ ಎಲ್ಲಿ ಹೋದ ಎಂದು ಆತನ ಅಭಿಮಾನಿಗಳು ಬೇಸರದಲ್ಲಿದ್ದಾಗಲೇ ಆತ ಭಾರತದಲ್ಲಿ ಜಾಹೀರಾತಿನಲ್ಲಿ ಕಾಣಿಸಿಕೊಂಡಿದ್ದಾನೆ. 63ರ ಈ ಹಿರಿಯ ನಟ ಈಗಲೂ ಶತ್ರುಗಳನ್ನು ಅಟ್ಟುತ್ತಾನೆ, ಸುಂದರಿಯರ ಜೊತೆ ಹೆಜ್ಜೆ ಹಾಕುತ್ತಾನೆ, ಆದರೆ ಕೈಯಲ್ಲಿ ಪಾನ್ ಮಸಾಲಾ ಸ್ಯಾಶೆ ಹಿಡಿದು.

ಕೆಲವು ದಿನಗಳ ಹಿಂದಷ್ಟೇ ಐಎಎಫ್ ಪ್ರವೇಶ ಪರೀಕ್ಷೆಯಲ್ಲಿ ನಟಿ ದೀಪಿಕಾ ಪಡುಕೋಣೆ ಬಗ್ಗೆ ಪ್ರಶ್ನೆಯನ್ನು ಕೇಳಲಾಗಿತ್ತು. ಇದೀಗ ಮಹಾರಾಷ್ಟ್ರದ ಭಿವಂಡಿಯ ಹೈಸ್ಕೂಲ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿಯ ಗೆಳತಿ ಯಾರು ಎಂಬ ಪ್ರಶ್ನೆಯನ್ನು 9ನೇ ತರಗತಿ ಪಿಟಿ ಪರೀಕ್ಷೆಯಲ್ಲಿ ಕೇಳಿದೆಯಂತೆ. ಜೊತೆಗೆ ಪ್ರಿಯಾಂಕಾ, ದೀಪಿಕಾ, ಅನುಷ್ಕಾ ಎಂದು ಆಯ್ಕೆಗಳನ್ನೂ ಕೊಟ್ಟಿದೆಯಂತೆ. ವಿದ್ಯಾರ್ಥಿಗಳು ಪಠ್ಯ ಪುಸ್ತಕದ ಹುಳುವಾದರೆ ಸಾಲದು, ಗಾಸಿಪ್ ಕಾಲಮ್ಮಿನ ಕಡೆಗೂ ಲಕ್ಷ್ಯ ನೀಡಿ ಸಾಮಾನ್ಯ ಜ್ಞಾನ ಬೆಳೆಸಿಕೊಳ್ಳಬೇಕು.